ಶ್ರೀ ಕೆ. ರಾಮಭಟ್.—ಎರೆಡು ವರ್ಷಗಳಾದ ಮೇಲೆ ಫೈದರೋಬ್ಬರನ್ನು ಅಲ್ಲಿಗೆ ನೇಮಕ ಮಾಡಲಾಗಿದೆ. ಅದಕ್ಕಾಗಿ ಧನ್ಯವಾದಗಳು. ಸಮಾನ್ಯವಾಗಿ ಇಂತಹ ಆಸ್ಪತ್ರೆಗಳಲ್ಲಿ ವೈದ್ಯರುಗಳ ಜಾಗಗಳು ಆಗಿಂದ ಗೆ ಖಾಲಿ ಬಿಳುವ ಸಂದರ್ಭ ಬರುತ್ತಿರುತ್ತದೆ. ಇಂತಹ ಪರಿಸ್ಥಿತಿ ಬರದ ಹಾಗೆ ಸರಕಾರದವರು ಮಾಡುವರೆ ?

ಶ್ರೀ ಎಂ. ಮಲ್ಲಪ್ಪ.—ಅದಕ್ಕೆಲ್ಲ ತಾವು ಸಹಕರಿಸಬೇಕು.

Roads formed under Sharavathy Valley Project Rehabilitation Programme in Sagar Taluk

80 SRI L. T. THIMMAPPA HEGDE (Sagar). —Will the Minister for Public Works be pleased to state :—

(a) the length of road, in miles, formed for rehabilitation under the Sharavathy Valley Project in Sagar Taluk ;

(b) whether it has come to the notice of the Government that the roads so formed are unfit for traffic for want of repairs ;

(c) whether the Government would pay attention at least in future to maintain the roads, once formed, properly in this area where no other communication facilities exist ?

SRI S. BANGARAPPA (Minister for Public Works).—

(a) 52.5 K.M. length of road has been formed as part of rehabilitation under Sharavathy Valley Project in Sagar Taluk.

(b) Yes. But, these roads have not been transferred to Public Works Department so far.

(c) The matter of handing over a portion of these roads to Panchayats, Taluk Development Boards and Public Works Department is under the active consideration of the Government. Attention will be paid for the proper maintenance of roads which are to be transferred to Public Works Department.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.— ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ಈ ರಸ್ತೆಗಳಲ್ಲಿ ಕೆಲವನ್ನು ಪಂಚಾಯ್ತಿಗಳಿಗೆ, ಕೆಲವನ್ನ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಮತ್ತೆ ಕೆಲವನ್ನು ಲೋಕೋಪಯೋಗಿ ಇಲಾಖೆಗೆ ಪರಿವಾವಣೆ ವಿಚಾರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಸಚಿವರು ತಿಳಿಸಿದರು. ಇದರಲ್ಲಿ ಎಷ್ಟೆಷ್ಟು ಮೈಲಿ ರಸ್ತೆಯನ್ನು ಯಾರು ಯಾರಿಗೆ ಪರಿಸಲಾಗುವುದೆಂಬುದನ್ನು ಮಾನ್ಯ ಸಚಿವರು ವಿವರವಾಗಿ ತಿಳಿಸುವರೆ ?

† ಶ್ರೀ ಎಸ್. ಬಂಗಾರಪ್ಪ.—ಈ ರಸ್ತೆಗಳನ್ನು ಶರಾವತಿ ಕಣಿವೆ ಯೋಜನೆ ಪುನರ್ವಸತಿ ಕಾರ್ಯಕ್ಕೆ ಸಂಬಂಧಿಸಿದಂತೆ ರಚನೆ ಮಾಡಿರುವುದಾಗಿದೆ. ಆಯಾ ಪ್ರದೇಶಗಳನುಗುಣವಾಗಿ ರಸ್ತೆಗಳನ್ನು ವಿಂಗಡಣೆ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಆದರೆ ಎಷ್ಟೆಷ್ಟು ಮೈಲಿಯನ್ನು ಯಾರು ಯಾರಿಗೆ ಪರಿಸಲಾಗುವುದೆಂಬುದು ಕ್ಷಣ ಗೊತ್ತಾಗುವುದಿಲ್ಲ. ಈ ರಸ್ತೆಗಳನ್ನು ದುರಸ್ತಿಯಾಗದೆ ಹಾಗೆ ನಿಂತಿವೆ ಎನ್ನುವ ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಆದುದರಿಂದ ಇದರ ಬಗ್ಗೆ ಆದಷ್ಟು ಶೀಘ್ರವಾಗಿ ವಿಚಾರ ಮಾಡಿ, ತೀರ್ಮಾನ ತೆಗೆದುಕೊಳ್ಳಲಾಗುವುದು.

ಶ್ರೀ ಎಲ್. ಟಿ. ಶಿವಪ್ಪ ಹೆಗಡೆ. ಈ ಬಗ್ಗೆ ಮಾನ್ಯ ಮಂತ್ರಿಗಳನ್ನೂ ನೋಡಲಾಗಿದೆ. ಆ ಭಾಗದ ಜನರು ಸಂಚಾರ ಯೋಗ್ಯ ರಸ್ತೆಗಳಿಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ತಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿ ಹಣವಿಲ್ಲದ ಕಾರಣ, ಈ ರಸ್ತೆಗಳು ದುರಸ್ತಿಯಾಗದೆ ಹಾಗೆಯೇ ಉಳಿದಿವೆ. ಈಗಲಾದರೂ ಲೋಕೋಪಯೋಗಿ ಇಲಾಖೆಯವರು ಇದನ್ನು ತಮ್ಮ ವಶಕ್ಕೆ ತೆಗೆದುಕೊಂಡು ದುರಸ್ತಿ ಪಡಿಸಲು ಪ್ರಯತ್ನ ಮಾಡುವರೆ ?

ಶ್ರೀ ಎಸ್. ಬಂಗಾರಪ್ಪ —ನಿಜ, ನಾನೂ ಕೂಡ ಅಲ್ಲಿ ಪ್ರವಾಸ ಮಾಡಿ ಬಂದಿದ್ದೇನೆ. ಅನೇಕ ರಸ್ತೆಗಳನ್ನು ನೋಡಿದ್ದೇನೆ. ಇವುಗಳ ಜೊತೆಗೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಪುಃ ಈ ರಸ್ತೆಗಳನ್ನು ಪಹಿಸಿಕೊಡುವುದರಿಂದ ದುರಸ್ತಿ ಕೆಲಸಗಳು ಆಗುತ್ತವೆಯೆಂ ಏನೋ ಎನ್ನುವ ಅನುಮಾನವು ಇದೆ. ಆದುದರಿ ದ. ಇದರ ಸಾಧಕ ಭಾ ದ ಗಳನ್ನು ವಿಚಾರ ಮಾಡಿ, ಆದಷ್ಟು ಜಾಗ್ರತೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುವುದು.

Lift Irrigation Scheme at Haraganahalli, Krishnaraj pet Taluk

452 SRI S. M. LINGAPPA (Krishnarajpet).—Will the Minister for Minor Irrigation be pleased to state :—

(a) whether a lift irrigation scheme near Haraganahally, Krishnaraj pet taluk has been prepared ;

(b) when the said Estimate was prepared ;

(c) the steps taken by the Government in this behalf ?

SRI D. B. CHANDREGOWDA (Minister for Minor Irrigation).—

(a) Yes

(b) During the year 1975-76.

(c) The land coming under the lift irrigation scheme has been included in the Hemavathi Left Bank atchkat, therefore there is no need for this scheme.

ಶ್ರೀ ಎಸ್. ಎಂ ಲಿಂಗಪ್ಪ —ಈ ಯಾತ ನೀರಾವರಿ ಯೋಜನೆಗೆ ಮಾಡಲಾಗಿದ್ದ ಅಂದಾಜು ಎಷ್ಟು ಎಂದು ಮಾನ್ಯ ಸಚಿವರು ತಿಳಿಸುವರೆ ?

† ಶ್ರೀ ಡಿ. ಬಿ. ಚಂದ್ರೇಗೌಡ.—ಈ ಯೋಜನೆಗೆ ಅಂದಾಜು ತಯಾರು ಮಾಡಲಿಲ್ಲ. ಈ ಯೋಜನೆ ಹೆ ಮಾವತಿ ಎಡದಂಡೆ ನಾಲೆ ಕೆಳಗಡೆ ಬರುವ ಅಚ್ಚುಕಟ್ಟು ಪ್ರದೇಶಕ್ಕೆ ಸೇರಿರುವುದರಿಂದ, ತಾಂತ್ರಿಕ ವರದಿಯನ್ನು ಪೂರ್ಣವಾಗಿ ಸಿದ್ಧ ಮಾಡಲಿಲ್ಲ.

ಶ್ರೀ ಎಸ್ ಎಂ. ಲಿಂಗಪ್ಪ —ಸ್ವಾಮಿ ಈ ಗ್ರಾಮಕ್ಕೆ ಸೇರಿರುವ ಉತ್ಕೃಷ್ಟವಾದ ಜಮೀನು ಕೃಷ್ಣರಾಜ ಸಾಗರ ಜಲಾಶಯ ದಲ್ಲಿ ಮುಳುಗಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಡಿ. ಬಿ. ಚಂದ್ರೇಗೌಡ.—ಈ ಪ್ರಶ್ನೆಗೂ ಅದಕ್ಕೂ ಸಂಬಂಧ ಇದ್ದಂತೆ ಕಾಣುವುದಿಲ್ಲ.

ಶ್ರೀ ಎಸ್. ಎಂ. ಲಿಂಗಪ್ಪ.—ಅಲ್ಲಿರತಕ್ಕವರು ನೂರಕ್ಕೆ ನೂರರಷ್ಟು ಬಡವರು ಸಣ್ಣ ರೈತರು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ?

ಶ್ರೀ ಡಿ. ಬಿ. ಚಂದ್ರೇಗೌಡ.—ಎಡದಂಡೆ ನಾಲೆಗೆ ಸೇರಿಸುವುದಕ್ಕೆ ಅದು ಕಾರಣ ಇರಬೇಕು.

ಶ್ರೀ ಎಸ್. ಎಂ. ಲಿಂಗಪ್ಪ.—ಎಡದಂಡೆ ನಾಲೆ ಪೂರೈಸಿ ಎಷ್ಟು ವರ್ಷದಲ್ಲಿ ನೀರು ಕೊಡುತ್ತೀರಾ ?

ಶ್ರೀ ಡಿ. ಬಿ. ಚಂದ್ರೇಗೌಡ.—ಇದು ನನ್ನ ಇಲಾಖೆಗೆ ಸಂಬಂಧಪಟ್ಟ ವಿಚಾರವಲ್ಲ, ಉತ್ತರ ಕೊಡುವುದು ಕಷ್ಟ.